ಆಯಿತು, ಮನೆಗಳಿಗೆ ಬೆಂಕಿ ಇಟ್ಟರು, ಆ ಕ್ಷಣ ಈ ತನಿಖೆಗೆ ಒಳಪಡಬೇಕೆಂದು ನಾನು ಡಿಮ್ಯಾಂಡ್ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಕೇಳಿ, ಈಗ ವಿರೋಧ ಪಕ್ಷದ ನಾಯಕರೇನು ವಿಷಯ ಎತ್ತಿದ್ದರು, ಅದು ಒಂದು ಗಂಭೀರವಾದ ವಿಚಾರ. ಅದಕ್ಕೆ ವಿವರಣೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಆದುದರಿಂದ, ಇದನ್ನು ಮುಂದುವರೆಸುವ ಅಗತ್ಯವಿಲ್ಲ. ನಾನು ಇದನ್ನು ಕ್ಲೋಸ್ ಮಾಡಿದ್ದೇನೆ. ಈಗ ಪ್ರಶ್ನೋತ್ತರಕ್ಕೆ ಹೋಗೋಣ. ಮಾನ್ಯ ಶ್ರೀರಾಮರೆಡ್ಡಿ...

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ: ಸಾರ್, ಒಂದು ಕ್ಲಾರಿಫಿಕೇಷನ್...

MR. SPEAKER: ನೋ. ಶ್ರೀರಾಮರೆಡ್ಡಿಯವರೆ ಪ್ರಶ್ನೆ ಕೇಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ತನಿಖೆಯಾಗಬೇಕೆಂದು ಹೇಳಿ...

ಅಧ್ಯಕ್ಷರು: ನಾನು ಕ್ಲೋಸ್ ಮಾಡಿದ್ದೇನೆ. ದಯವಿಟ್ಟು, ಕುಳಿತುಕೊಳ್ಳಿ, ನೋ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಸಾರ್, ಮಾನ್ಯ ಶಿವರಾಂರವರು ಮಾಡಿರುವ ಆರೋಪಗಳ ಬಗ್ಗೆ...

ಅಧ್ಯಕ್ಷರು: ಈಗ ಪ್ರಶ್ನೋತ್ತರ ಆರಂಭವಾಗಿದೆ. ಶ್ರೀರಾಮರೆಡ್ಡಿಯವರನ್ನು ಕರೆದಿದ್ದೇನೆ. ಅವರ ಪ್ರಶ್ನೆ ಉಳಿದು ಬೇರೆ ಯಾವುದೂ ರೆಕಾರ್ಡ್‌ಗೆ ಹೋಗಬಾರದು.

(ಗೊಂದಲ)

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ದಾಖಲು ಮಾಡಿರುವುದಿಲ್ಲ)

MR.SPEAKER: no ಕುಳಿತುಕೊಳ್ಳಿ. ನಾನು ಶ್ರೀರಾಮರೆಡ್ಡಿಯವರನ್ನು ಕರೆದಿದ್ದೇನೆ. ಶ್ರೀರಾಮರೆಡ್ಡಿಯವರೇ, ಪ್ರಶ್ನೆ ಕೇಳಿ. ನಾನು ಮುಗಿಸಿದ ಮೇಲೆ ಮತ್ತೆ ಅದನ್ನು ಮುಂದುವರಿಸುವ ಅಗತ್ಯವಿಲ್ಲ.

(ಗೊಂದಲ)

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ದಾಖಲು ಮಾಡಿರುವುದಿಲ್ಲ)

ಅಧ್ಯಕ್ಷರು: ನಾನು ರೂಲಿಂಗ್ ಕೊಟ್ಟಿದ್ದೇನೆ.

(ಗೊಂದಲ)